## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಶೋರಾಪುರ.

## ಸಿ.ಸಿ. ನಂ.218/2019

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ವೀರರಾಯಪ್ಪ ರಾಜು | ಸಿ.ಡಬ್ಲ್ಯೂ | ಃ 10 |
| ತಂದೆ ಹೆಸರು | ಃ ಪದ್ಮಣರಾಜು | ಪಿ.ಡಬ್ಲ್ಯೂ | ಃ 06 |
| ವಯಸ್ಸು | ಃ 62 ವರ್ಷ | | |
| ವೃತ್ತಿ | ಃ ಒಕ್ಕಲುತನ | | |
| ವಾಸ ಸ್ಥಳ | ಃ ಏವೂರು | | |

**ಸಾಕ್ಷಿಗೆ ಇಂದು ದಿನಾಂಕಃ 24.02.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ಚಾಸಾ-1 ಮತ್ತು 3 ರಿಂದ 6, 7, 9, 11 ರಿಂದ 15, 16, 17 ರಿಂದ 19 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಪರಿಚಯ ಇರುತ್ತಾನೆ. ನನಗೆ ಈ ಪ್ರಕರಣ ಕುರಿತು ಏನು ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಸ.ಸ.ಅ ರವರ ವಿನಂತಿ ಮೇರೆಗೆ ಪರಿಗಣಿಸಿ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.)**

**ಪಾಟೀ ಸವಾಲು ಃ ಅಭಿಯೋಜನೆ ಪರ ಸ.ಸ.ರವರಿಂದಃ**

ನಮ್ಮೂರಿನ ಕೃಷಿ ಪತ್ತಿನ ಸಹಕಾರಿ ಸಂಘದ ಸೊಸೈಟಿಯ ಕಾರ್ಯದರ್ಶಿಯು ದಿನಾಲು ಸೊಸೈಟಿಗೆ ಬರದೆ ನಗನೂರು ಗ್ರಾಮದಲ್ಲಿ ಇರುತ್ತಾರೆ, ಗ್ರಾಮದ ಎಲ್ಲಾ ರೈತರು ಏನಾದರೂ ಸಮಸ್ಯೆ ಬಗ್ಗೆ ವಿಚಾರಿಸಲು ಸೊಸೈಟಿಗೆ ಹೋದರೆ ಕಾರ್ಯದರ್ಶಿಗಳು ಸಿಗುತ್ತಿಲ್ಲ, ನಾವು ಎಲ್ಲಾ ಜನರು ಸೇರಿ ಅವನು ಇದ್ದಲ್ಲಿಗೆ ಹೋಗಿ ಸರಕಾರದಿಂದ ಮಂಜೂರಾದ ಬೆಳೆ ವಿಮೆ ಹಣದ ಬಗ್ಗೆ ವಿಚಾರಿಸಿದಾಗ ಯಾವುದೇ ಬೆಳೆ ವಿಮೆ ಬಂದಿರುವುದಿಲ್ಲ ಸುಮ್ಮನೆ ಹೋಗಿ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ನಾವು ತಾಲೂಕ ಡಿ.ಸಿ.ಸಿ ಬ್ಯಾಂಕ್ ಶಾಖೆ ಸುರಪುರದಲ್ಲಿ ಹೋಗಿ ರೈತರ ಬೆಳೆವಿಮೆ ಬಗ್ಗೆ ವಿಚಾರಿಸಲಾಗಿ ಹಾಗೂ ಜಿ.ಡಿ.ಸಿ.ಸಿ ಗುಲ್ಬರ್ಗಾ ಶಾಖೆಗೆ ವಿಚಾರಿಸಿಲಾಗಿ ನಮ್ಮ ಏವೂರು ಸೊಸೈಟಿಗೆ ಸರಕಾರದಿಂದ ದಿ.12-08-2012 ರಂದು ರೂ.1,55,100/- ಗಳ ಹಣ 165 ಫಲಾನುಭವಿಗಳಿಗೆ ದಿನಾಂಕ 28-02-2013 ರಂದು 106 ಫಲಾನುಭವಿಗಳಿಗೆ ರೂ.2,09,955/-

ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನಾಂಕ ರೂ.4,62,806/- ಗಳನ್ನು ಒಟ್ಟು 46 ಫಲಾನುಭವಿಗಳಿಗೆ ಮಂಜೂರಾಗಿದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾವು ಬೆಳೆ ವಿಮೆ ವಿತರಿಸಿದ ಬಗ್ಗೆ ಫಲಾನುಭವಿಗಳ ಯಾದಿಯನ್ನು ಆರೋಪಿತನಿಗೆ ಕೇಳಲಾಗಿ ಜಿಲ್ಲಾ ಕಚೇರಿಯಲ್ಲಿ ಮತ್ತು ತಾಲೂಕ ಕಚೇರಿಯಲ್ಲಿ ಯಾದಿ ಇರುತ್ತದೆ ಮತ್ತು ನಮ್ಮ ಹತ್ತಿರ ಯಾವುದೇ ಯಾದಿ ಇರುತ್ತದಿಲ್ಲ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ ನಮ್ಮೂರಿನ ಕೆಲ ರೈತರು ಕೂಡಿ ಜಂಟಿ ನಿರ್ದೇಶಕರು ಸಹಕಾರ ಇಲಾಖೆ ರಾಯಚೂರು ಇವರಿಗೆ ಅರ್ಜಿಯನ್ನು ನೀಡಿದ್ದು ಅದರ ಪ್ರತಿಯನ್ನು ಉಪನಿರ್ದೇಶಕರು ಸಹಾಕರ ಇಲಾಖೆ ಇವರಿಗೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಷಯದಲ್ಲಿ ಸೂಕ್ತ ತಪಾಸಣೆ ಮಾಡಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.  ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ನಿಪಿ-3 ರಲ್ಲಿರುವ ವಿಷಯ ಗೊತ್ತಿದ್ದರೂ ಸಹಿತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಮೇಲೆ ಓದಿ ಹೇಳಲಾದಂತೆ ನಿಪಿ-5 ರಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ಬಳಕೆ ಮಾಡಿಕೊಂಡ ಹಣವನ್ನು ದಿನಾಂಕ 03-10-2014 ರಂದು ರೂ.3 ಲಕ್ಷಗಳು ಹಾಗೂ ದಿನಾಂಕ 12-10-2013 ರಂದು ರೂ.1,50,000/- ಗಳನ್ನು ಕೆ.ಜಿ.ಬಿ ಬ್ಯಾಂಕ್ ನಗನೂರಿನಲ್ಲಿ ಮರಳಿ ತುಂಬಿರುತ್ತಾರೆ ಎಂದರೆ ಸರಿಯಲ್ಲ. ಅಧ್ಯಕ್ಷ ಮತ್ತು ಕಾರ್ಯದರ್ಶಿ ತಾನೂ ದುರುಪಯೋಗ ಪಡಿಸಿಕೊಂಡ ಹಣ ಕಾನೂನಡಿಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇವೆ ಅಂತ ತಪ್ಪಿಸಿಕೊಳ್ಳಲು ಹಣವನ್ನು ಮರಳಿ ತುಂಬ ತಮ್ಮ ಸ್ಥಾನಗಳಿಗೆ ರಾಜಿನಾಮೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ರೈತರ ಬೆಳೆ ವಿಮೆಯ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಮೇಲೆ ಓದಿ ಹೇಳಿದಂತೆ ನಿಪಿ-7 ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.  ಎಂದರೆ ಸರಿಯಲ್ಲ. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.